[ Govt. of Karnataka C.R.P. 67]

| |
|---|
| Deposition Sheets (RP.No.57) Form No.4 |

## IN THE COURT OF Addl. CIVIL JUDGE & J.M.F.C., KARKALA.

**Criminal Case No. 1062/2014**

ಪಿ.ಡಬ್ಲ್ಯು : 2 ಸಿ.ಡಬ್ಲ್ಯು : 3

| | | |
|---|---|---|
| ಸಾಕ್ಷಿದಾರನ ಹೆಸರು | : | ರಮಾನಂದ ಮೂಲ್ಯ |
| ತಂದೆಯ ಹೆಸರು | : | ಭೋಜ ಮೂಲ್ಯ |
| ಪ್ರಾಯ | : | 62 ವರ್ಷ |
| ಉದ್ಯೋಗ | : | ಕೂಲಿ |
| ವಾಸ | : | ಪಣಿಯೂರು |

ದಿನಾಂಕ 07.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಚಾಸಾ-1 ನನ್ನ ತಾಯಿ. ಚಾಸಾ-2 ನನ್ನ ಅಕ್ಕನ ಮಗಳು.

ನಾನು ನಂದಿಕೂರು ಪವರ್ ಪ್ರಾಜೆಕ್ಟ್ ನ ಕ್ಯಾಂಟಿನಲ್ಲಿ ಕೆಲಸ ಮಾಡಿಕೊಂಡಿದ್ದೆ. ವಾರಕ್ಕೆ ಒಮ್ಮೆ ನನ್ನ ತಾಯಿ ಚಾಸಾ-1 ರವರ ಮನೆಗೆ ಬಂದು ಮತನಾಡಿಕೊಂಡು ಹೋಗುತ್ತಿದ್ದೆ. ಒಂದು ದಿನ ತಾಯಿಯು ನೀರು ಕುಡಿಯವಾಗ ಅವರ ಕುತ್ತಿಗೆಯಲ್ಲಿದ್ದ ಸರ ಕಾಣಿಸಲಿಲ್ಲ. ಆಗ ನಾನು ಚಿನ್ನದ ಸರ ಏನಾಯಿತು ಎಂದು ಕೇಳಿದಾಗ ಚಾಸಾ-1 ರವರು ಅವರ ದೊಡ್ಡ ಮಗ ನನ್ನ ಅಣ್ಣನ ಮನೆ ಸಾಣೂರಿಗೆ ಚಾಸಾ-2 ರವರನ್ನು ಕರೆದುಕೊಂಡು ಹೋಗಿ ಹಿಂತಿರುಗಿ ಬರುವಾಗ ಸಮಯ ಸಂಜೆ 4.00 ಗಂಟೆಗೆ ಚಿಲಿಂಬಿ ಕಡೆಯಿಂದ ಬಾರಾಡಿ ಕಂಬಳ ಕಡೆಗೆ 2 ಜನ ವ್ಯಕ್ತಿಗಳು ಬೈಕ್ ನಲ್ಲಿ ಬರುತ್ತಿದ್ದರು. ನಮ್ಮನ್ನು ನೋಡಿ ಸ್ವಲ್ವ ಮುಂದೆ ಹೋಗಿ ತಿರುಗಿ ಬಂದು ಪರಪ್ಪಾಡಿ ಕಡೆ ಗಾಡಿಯನ್ನು ನಿಲ್ಲಿಸಿ ಗಾಡಿಯ ಹಿಂದೆ ಕೂತಿದ್ದ ವ್ಯಕ್ತಿ ಬಂದು ಸಾಣೂರಿಗೆ ಹೋಗಲು ಹತ್ತಿರದ ದಾರಿ ಯಾವುದು ಎಂದು ಕೇಳಿದರು, ಆಗ ನಾನು ,ಚಿಲಿಂಬಿ ಕಡೆಯಿಂದ ಕಡೆಯಿಂದ ಹೋದರೆ ಹತ್ತಿರವಾಗುತ್ತದೆ

ಎಂದು ಹೇಳಿರುತ್ತೇನೆ. ಆಗ ಸದರಿ ವ್ಯಕ್ತಿಯು ನನ್ನನ್ನು ಎಡ ಬದಿಗೆ ದೂಡಿ ನನ್ನ ಕುತ್ತಿಗೆಯಲ್ಲಿದ್ದ ಚಿನ್ನದ ಡಿಸ್ಕೊ ಸರವನ್ನು ಎಳೆದು ಓಡಿಹೋಗಿರುತ್ತಾರೆ ಎಂದು ತಿಳಿಸಿರುತ್ತಾರೆ. ಆ ಸಮಯದಲ್ಲಿ ನಾನು ಮತ್ತು ಚಾಸಾ-2 ರವರು ಬೊಬ್ಬೆ ಹೊಡೆದರೆ ಅಲ್ಲಿ ಯಾರು ಇರಲಿಲ್ಲ' ಎಂದು ತಿಳಿಸಿದರು. ಆಗ ನೀವು ಈ ಬಗ್ಗೆ ದೂರು ನೀಡಿದ್ದೀರಾ ಎಂದು ಕೇಳಿದೆ. ಇಲ್ಲ ಎಂದು ತಿಳಿಸಿದರು. ನೀವು ಮತ್ತು ಚಾಸಾ-2 ರವರು ಹೋಗಿ ದೂರನ್ನು ನೀಡಿ ಎಂದು ಹೇಳಿ ಕೆಲಸಕ್ಕೆ ಹೋಗಿರುತ್ತೇನೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

<u>ಪಾಟೀ ಸವಾಲು</u> ಃ 1 ನೇ ಆರೋಪಿ ಪರಃ ಶ್ರೀ ಹೆಚ್ ಆರ್. ಕೆ . ವಕೀಲರಿಂದಃ ಏನು ಇಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ